ಹೋಗಿ ವಿಶ್ರಾಂತಿಯೇನಾದ್ರು ತಗೋತಿದ್ರ?...' ಅಂತ ಉಪಚರಿಸಿದರು. ಕಾಮತರು, 'ಎಷ್ಟು ಮಹಾ ಪ್ರಯಾಣ ಮಾಡಿದ್ದು ವಿಶ್ರಾಂತಿ ತಗಳೋದಕ್ಕೆ! ಫ್ರೆಶ್ ಆಗಿದೇನೆ. ನಾಕೈದು ತಾಸು ಅಂದ್ರಲ್ಲವ, ಟ್ಯಾಕ್ಸಿಯಲ್ಲೇ ಹೋಗಿಬಿಡುವ' ಅಂದರು. ಪ್ರಯಾಣ ಕಾಲದಲ್ಲಿ ಕಾಮತರ ಹೋಟೆಲ್ ಬಿಸಿನೆಸ್ಸು, ಪೂರ್ವಿಕರು ಗೋವೆಯಲ್ಲಿದ್ದದ್ದು, ಅಡಕೆ ದರ, ತೋಟ ಗದ್ದೆಯ ಶುದ್ಧಹವೆ ಅಂತೆಲ್ಲ ಚರ್ಚಿಸುತ್ತ ಆತ್ಮೀಯತೆ ವರ್ಧಿಸುತ್ತಿತ್ತು. ಮುಂಬಯಿಯ ಗಡಿಬಿಡಿ ಜೀವನ, ಬಿಸಿನೆಸ್ಸಿನ ಬಿಗಿ ವಾತಾವರಣದಲ್ಲಿದ್ದವರಿಗೆ ಶುದ್ಧಗಾಳಿಯ, ಒತ್ತಡವಿಲ್ಲದ ಬದುಕಿನ ಸೆಳೆತವಿರುವುದರ ವಾಸನೆ ಸಿಕ್ಕಿತು. ಹೆಗಡೆಯವರು ತೋಟವನ್ನು ಸ್ವಂತ ತೋಟದಂತೆ ನಿರ್ವಹಣೆ ಮಾಡಿದ್ದರು. ಹಚ್ಚಹಸುರಿನ ಕಾಳುಮೆಣಸಿನ ಬಳ್ಳಿ, ಸೊಂಪಾದ ಬಾಳೆಯ ಗಿಡ, ಅಡಕೆಮರಗಳ ತೋಟ ತಂಪಾಗಿ ಸಮೃದ್ಧವಾಗಿತ್ತು. ಕಾಮತರ ಮನಸ್ಸು ಆಕರ್ಷಿತವಾಗಿತ್ತು. ವ್ಯವಹಾರದಲ್ಲಿ ಪಳಗಿದ ಅವರು ಶಬ್ದಗಳಲ್ಲಿ ಬಿಟ್ಟುಕೊಡಲಿಲ್ಲ. ಆದರೆ ಮುಖದ ಪ್ರಸನ್ನತೆ ಹೆಗಡೆಯವರಿಗೆ ಸಾಕಾಗಿತ್ತು. 'ಪೇಟೇಲಿ ಕೆಲ ಹೊರಗಿಂದ ಬಂದು ನೆಲೆಸಿದೋರು ಮೂರುಕೋಟಿ ಒಂದು ನಿಮಿಷದಲ್ಲಿ ಬಿಸಾಕಲಿಕ್ಕೆ ತಯಾರಿದಾರೆ ಇಂತ ತೋಟಕ್ಕೆ. ಹಾಗಂತ ಮಕ್ಕಳಂತೆ ವಾಗಾತಿ ಮಾಡಿದ್ದನ್ನ ಯಾರು ಸಿಕ್ಕರೆ ಅವರಿಗೆ ಕೊಡಲಿಕ್ಕೆ ಬರತದಾ? ದುಡ್ಡೇ ಮುಖ್ಯ ಅಲ್ಲ ನೋಡಿ...' ಹೆಗಡೆಯವರು ಒಂದು ಪ್ರಸ್ತಾಪದ ಮಾತು ಹಾಕಿದರು. 'ಕಾಗದಪತ್ರ ಎಲ್ಲಾ ಮನೇಲಿದೆ. ಬನ್ನಿ, ಅಲ್ಲೆ ಮಾತಾಡಿದ್ರಾಯ್ತು' ಯಾರೋ ಬಂದದ್ದರ ಗಾಳಿ ಜನರಿಗೆ ಆದಷ್ಟೂ ಸಿಗೋದು ಬೇಡ ಎಂಬ ಇರಾದೆಯಲ್ಲಿದ್ದರು. ತೋಟದ ಆರೋಗ್ಯ, ಲಗತಾಗಿದ್ದ ಬೆಟ್ಟ ಕಾಮತರಲ್ಲಿ ಆಕರ್ಷಣೆ ಹೆಚ್ಚಿಸಿತ್ತು. ಕಾಗದಪತ್ರಗಳನ್ನೆಲ್ಲ ಕೂಲಂಕಷವಾಗಿ ವಿವರಿಸಿ ಯಾವುದೆ ತಂಟೆ ತೊಡಕುಗಳಿಲ್ಲದ್ದನ್ನು ಖಾತ್ರಿ ಮಾಡಿದರು. 'ನೋಡಿ, ನಿಮ್ಮ ದುಡ್ಡಿಲ್ಲಿ ಬೆಳಿತಾನೇ ಹೋಗತದೆ. ಸಂಗಡ ಮನಃಶಾಂತಿ' ಹೆಂಡತಿ ಅಡುಗೆಮನೆಯಲ್ಲಿರುವುದನ್ನು ಖಚಿತಪಡಿಸಿಕೊಂಡು ಸೇರಿಸಿದರು: 'ಭಾವಮೈದುನ ಮೂರುಕೊಟಿ ಅಂತಿದಾನೆ.'

'ಅಯ್ಯೊ! ಮೂರುಕೋಟಿ ಎಲ್ಲಿಂದ ತರೋದು? ಹೋಟೆಲು ಮಾರಿಬಿಡಿ ಅಂತೀರಾ ಏನು ಕತೆ? ನನ್ನ ಲಿಮಿಟ್ಟಿನಲ್ಲಿ ಏನಾದ್ರು ಇದ್ದಿದ್ದರೆ ನೋಡೋಣ ಅಂತಿದ್ದೆ... ಋಣ ಇಲ್ಲ ಬಿಡಿ' ಕಾಮತರು ಹಣೆ ಉಜ್ಜಿಕೊಳ್ಳುತ್ತ ಮೇಲೆ ನೋಡಿದರು. ಹೆಗಡೆಯವರು ಇಪ್ಪತ್ತೈದು ಇಳಿಸಿದರು. ಕಾಮತರು ಒಂದೂಕಾಲಿಂದ ಒಂದೂವರೆಗೆ ಬಂದರು. ಜಗ್ಗಾಟದಲ್ಲಿ ಹೆಗಡೆಯವರಿಗೆ ಏನೊ ಹೊಳೆದು, 'ಸ್ವಲ್ಪ ನಗದಾದರು ಕಳೀತದೆ...' ಅಂದರು. ಹಾಗೆಹೀಗೆ ಹೊರಳಿ ಎರಡೂಕಾಲು ಕೋಟಿಯ ವ್ಯವಹಾರ ನಿಕ್ಕಿಯಾಯಿತು. ಒಂದೂಕಾಲು ಕೋಟಿ ರಿಜಿಸ್ಟ್ರೇಶನ್ ಮಾಡುವುದು, ಒಂದುಕೋಟಿ ನಗದು ಕೊಡುವುದು ಅಂತ ಒಪ್ಪಿಗೆಯಾಯಿತು. ಸಂಪ್ರದಾಯದಂತೆ ಹತ್ತುಸಾವಿರದಮೇಲೆ ಒಂದನ್ನು ವೀಳೆಯದೆಲೆಯಲ್ಲಿಟ್ಟು ಕೊಟ್ಟದ್ದನ್ನು ಹೆಗಡೆಯವರು ದೇವರೆದುರು ಇಟ್ಟರು. ಹೆಂಡತಿಯ ಹತ್ತಿರ ಹೋಗಿ ಏನಾದರು ಸಿಹಿ ಮಾಡು, ನಮ್ಮ ಜಗನ್ನಾಥ ಗೆದ್ದ ಅಂದರು. 'ಯಾರು ಕೇಳಿದ್ರೂ ಒಂದೂಕಾಲು ಕೋಟಿಗಾದ್ದು ವ್ಯವಹಾರ ಅನ್ನಿ ಆಯ್ತಾ...' ಅಂತ ಕಾಮತರನ್ನು ಬೀಳ್ಕೊಡುವಾಗ ವಿನಂತಿಯೂ ಎಚ್ಚರಿಕೆಯೂ ಆಗಬಹುದಾದ ಪಿಸುದನಿಯಲ್ಲಿ ಅಂದರು. ರಾತ್ರಿ ಮಲಗಿದವರಿಗೆ ಕತ್ತಲೆಯಲ್ಲಿ ವಿವರಗಳು ಮೂಡುತ್ತಹೋದಂತೆ ಅರ್ಥವಾಯಿತು. ಲೆಕ್ಕದಲ್ಲಿಲ್ಲದ ಒಂದುಕೋಟಿ ಕೈಗೆ ಬರುತ್ತಲಿತ್ತು. ಒಂದೂಕಾಲು ಕೋಟಿ ಕಮ್ಮಿಯಲ್ಲ. ಅದು ಇಲ್ಲಿಯವರಾಗಿದ್ದರೆ ಕೊಡುತ್ತಿದ್ದ ಬೆಲೆಯೆ. ಜಗನ್ನಾಥನಿಗೆ ಅಷ್ಟು ಕೊಟ್ಟರೆ ಅನ್ಯಾಯವೇನಿಲ್ಲ ಅನಿಸತೊಡಗಿ ಅದೆ ಗಟ್ಟಿಯಾಯಿತು. ಅವನಿಗೆ ಅಮೆರಿಕದಲ್ಲಿ ಗಳಿಕೆಯಿದೆ. ತನಗಿಲ್ಲಿ ಸಮಸ್ಯೆಗಳಿವೆ. ಮಗನಿಗೆ ನಲವತ್ತು